All India Radio: Bangalore
National Bulletin In Kannada
31.08.2026 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
31.08.2026 07.35 a.m.
<><><><>

ಮುಖ್ಯಾಂಶಗಳು

- ಪ್ರಧಾನಿ ನರೇಂದ್ರ ಮೋದಿ ಕಿರ್ಗಿಸ್ತಾನ್ ಪ್ರವಾಸ : ಇಂದು ೨೬ನೇ ಎಸ್‌ಸಿಒ ಶೃಂಗಸಭೆಯಲ್ಲಿ ಭಾಗಿ
- ನವದೆಹಲಿಯಲ್ಲಿ ರಾಷ್ಟ್ರೀಯ ಫ್ಯಾಶನ್ ತಂತ್ರಜ್ಞಾನ ಸಂಸ್ಥೆಯ ಘಟಿಕೋತ್ಸವದಲ್ಲಿಂದು ಪಾಲ್ಗೊಳ್ಳಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು
- ನೇಪಾಳ ಪ್ರವಾಹ ; ಮೃತರ ಸಂಖ್ಯೆ ೭೯ಳಕ್ಕೆ ಏರಿಕೆ ; ಮುಂದುವರಿದ ರಕ್ಷಣಾ ಹಾಗೂ ಶೋಧ ಕಾರ್ಯ
- ಮುಂಬೈನಲ್ಲಿಂದು ಜಲಾಂತರ್ಗಾಮಿ ಬೆಂಬಲ ನೌಕೆ ನಿಪುಣ್, ಭಾರತೀಯ ನೌಕಾಪಡೆಗೆ ಸೇರ್ಪಡೆ
- ಶ್ರೀಲಂಕಾದಿಂದ ಮಹಿಳಾ ಚಾಂಪಿಯನ್ಸ್ ಟ್ರೋಫಿ-೨೦೨೭ರ ಆತಿಥ್ಯ ಹಕ್ಕು ಹಿಂಪಡೆದ ಐಸಿಸಿ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎರಡು ದಿನಗಳ ಅಧಿಕೃತ ಭೇಟಿಗಾಗಿ ನಿನ್ನೆ ಕಿರ್ಗಿಸ್ತಾನ್‌ನ ಬಿಷ್ಕೆಕ್‌ಗೆ ತಲುಪಿದ್ದಾರೆ. ಕಿರ್ಗಿಸ್ತಾನ್ ಅಧ್ಯಕ್ಷ ಸಾದಿರ್ ಝುಪರೋವ್ ಅವರ ಆಹ್ವಾನದ ಮೇರೆಗೆ ಅಲ್ಲಿ ಆಯೋಜಿಸಲಾಗಿರುವ ೨೬ನೇ ಶಾಂಘೈ ಸಹಕಾರ ಸಂಘಟನೆಯ ಎಸ್‌ಸಿಒ ಶೃಂಗಸಭೆಯಲ್ಲಿ ಪ್ರಧಾನಿಯವರು ಇಂದು ಮತ್ತು ನಾಳೆ ಭಾಗವಹಿಸಲಿದ್ದಾರೆ. ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿಯವರನ್ನು ಸಚಿವರ ಮಂಡಳಿಯ ಅಧ್ಯಕ್ಷ ಕಾಸಿಮಾಲಿಯೇವ್ ಅದಿಲ್ಬೆಕ್ ಅಲೆಶೋವಿಚ್ ಅವರು ಆತ್ಮೀಯವಾಗಿ ಬರಮಾಡಿಕೊಂಡರು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಗೌರವಾರ್ಥ ಕಿರ್ಗಿಸ್ತಾನ್‌ನ ಸಾಂಪ್ರದಾಯಿಕ ನೃತ್ಯ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಶೃಂಗಸಭೆಯ ಜೊತೆಗೆ ವಿವಿಧ ಎಸ್‌ಸಿಒ ರಾಷ್ಟ್ರಗಳ ಮುಖ್ಯಸ್ಥರೊಂದಿಗೆ ಪ್ರಧಾನಿ ಮೋದಿ ದ್ವಿಪಕ್ಷೀಯ ಮಾತುಕತೆ ನಡೆಸುವ ನಿರೀಕ್ಷೆಯಿದ್ದು, ನಾಳೆ ನಡೆಯಲಿರುವ ರಾಷ್ಟ್ರ ಮುಖ್ಯಸ್ಥರ ಪ್ರಮುಖ ಗೋಷ್ಠಿಯಲ್ಲೂ ಪಾಲ್ಗೊಳ್ಳಲಿದ್ದಾರೆ. ತಾವು ತೆರಳುವ ಮುನ್ನ ಕಳೆದ ಶನಿವಾರ ಹೇಳಿಕೆ ನೀಡಿದ್ದ ಪ್ರಧಾನಿಯವರು, ಭದ್ರತೆ, ಸಂಪರ್ಕ ಮತ್ತು ಅವಕಾಶಗಳ ಆಧಾರದ ಮೇಲೆ ಪ್ರಾದೇಶಿಕ ದೃಷ್ಟಿಕೋನವನ್ನು ಮುನ್ನಡೆಸಲು ಭಾರತ ಎದುರು ನೋಡುತ್ತಿದೆ ಎಂದು ತಿಳಿಸಿದ್ದರು. ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಉಗ್ರವಾದದಿಂದ ಮುಕ್ತವಾದ ವಾತಾವರಣ ನಿರ್ಮಿಸಲು ಭಾರತವು ಎಸ್‌ಸಿಒ ಸದಸ್ಯ ರಾಷ್ಟ್ರಗಳೊಂದಿಗೆ ಶ್ರಮಿಸಲಿದೆ ಎಂದು ಅವರು ಸ್ಪಷ್ಟಪಡಿಸಿದ್ದರು. ಈ ಪ್ರವಾಸವು ಮಧ್ಯ ಏಷ್ಯಾದಲ್ಲಿ ಭಾರತದ ಕಾರ್ಯತಂತ್ರ ಸಹಭಾಗಿತ್ವ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲಿದ್ದು, ಪ್ರಾದೇಶಿಕ ಶಾಂತಿ ಹಾಗೂ ಸಮೃದ್ಧಿಯ ಜಂಟಿ ಗುರಿಗೆ ನೆರವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. 'ಎಸ್‌ಸಿಒ ೨೫ ವರ್ಷಗಳು: ಒಟ್ಟಾಗಿ, ಸುಸ್ಥಿರ ಶಾಂತಿ, ಅಭಿವೃದ್ಧಿ ಮತ್ತು ಸಮೃದ್ಧಿಯತ್ತ' ಎನ್ನುವ ಧ್ಯೇಯವಾಕ್ಯದಡಿ ಈ ಬಾರಿಯ ಶೃಂಗಸಭೆ ನಡೆಯುತ್ತಿದ್ದು, ಭಯೋತ್ಪಾದನಾ ನಿಗ್ರಹ, ಪ್ರಾದೇಶಿಕ ಸ್ಥಿರತೆ ಮತ್ತು ಗಡಿಯಾಚೆಗಿನ ಭದ್ರತಾ ಬೆದರಿಕೆಗಳ ನಿರ್ವಹಣೆಗೆ ಶೃಂಗಸಭೆ ಆದ್ಯತೆ ನೀಡಿದೆ. ನಾಳೆ ನಡೆಯಲಿರುವ ನಾಯಕರ ಗೋಷ್ಠಿಯಲ್ಲಿ ಬಿಷ್ಕೆಕ್ ಘೋಷಣೆ ಸೇರಿದಂತೆ ಹಲವು ಪ್ರಮುಖ ನಿರ್ಣಯಗಳನ್ನು ಅಂತಿಮಗೊಳಿಸುವ ನಿರೀಕ್ಷೆಯಿದೆ. ಇದೇ ವೇಳೆ ಪ್ರಧಾನಿ ಅವರು ೬ನೇ 'ವರ್ಲ್ಡ್ ನೊಮ್ಯಾಡ್ ಗೇಮ್ಸ್' ಉದ್ಘಾಟನಾ ಸಮಾರಂಭದಲ್ಲೂ ಭಾಗವಹಿಸಲಿದ್ದಾರೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉಜ್ಬೇಕಿಸ್ತಾನ್‌ನ ತಾಷ್ಕೆಂಟ್‌ಗೆ ಕೈಗೊಂಡಿದ್ದ ಎರಡು ದಿನಗಳ ಅಧಿಕೃತ ಪ್ರವಾಸ ನಿನ್ನೆ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಈ ಭೇಟಿಯ ವೇಳೆ ಉಜ್ಬೇಕಿಸ್ತಾನ್ ಅಧ್ಯಕ್ಷ ಶಾವ್ಕತ್ ಮಿರ್ಜಿಯೋಯೆವ್ ಅವರೊಂದಿಗೆ ನಡೆಸಿದ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆಯ ನಂತರ, ಭಾರತ ಮತ್ತು ಉಜ್ಬೇಕಿಸ್ತಾನ್ ನಡುವಿನ ಸಂಬಂಧವನ್ನು 'ಸಮಗ್ರ ಕಾರ್ಯತಂತ್ರ ಸಹಭಾಗಿತ್ವ ಮಟ್ಟಕ್ಕೇರಿಸಲು ಉಭಯ ನಾಯಕರು ಸಮ್ಮತಿಸಿದ್ದಾರೆ.

ಈ ಪ್ರವಾಸದ ಪ್ರಮುಖ ಮೈಲಿಗಲ್ಲಾಗಿ, ಭಾರತ ಮತ್ತು ಉಜ್ಬೇಕಿಸ್ತಾನ್ ನಡುವಿನ ಬಾಂಧವ್ಯವನ್ನು ಬಲಪಡಿಸುವಲ್ಲಿ ನೀಡಿದ ಗಣನೀಯ ಕೊಡುಗೆಯನ್ನು ಗುರುತಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉಜ್ಬೇಕಿಸ್ತಾನ್‌ನ ಅತ್ಯುನ್ನತ ಗೌರವವಾದ 'ಆರ್ಡರ್ ಆಫ್ ಒಲ್ಯ್ ದರಾಜಲಿ ದೋಸ್ತ್‌ಲಿಕ್' ಪ್ರಶಸ್ತಿಯನ್ನು ನೀಡಿ ಅಧ್ಯಕ್ಷ ಶಾವ್ಕತ್ ಮಿರ್ಜಿಯೋಯೆವ್ ಗೌರವಿಸಿದರು. ಈ ಭೇಟಿಯ ವೇಳೆ ನಿರ್ಣಾಯಕ ಖನಿಜಗಳು, ಯುರೇನಿಯಂ, ರಕ್ಷಣೆ, ಡಿಜಿಟಲ್ ಪಾವತಿ, ಶಿಕ್ಷಣ, ಕ್ರೀಡೆ ಹಾಗೂ ಪರಂಪರೆ ಸಂರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ೧೧ ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಮುಂಬರುವ ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ೫ ಬಿಲಿಯನ್ ಡಾಲರ್‌ಗೆ ಹೆಚ್ಚಿಸುವ ಗುರಿ, ದೀರ್ಘಾವಧಿಯ ಇಂಧನ ಸಹಕಾರ ಮತ್ತು ರಾಜ್ಯ-ನಗರ ಮಟ್ಟದ ಹೆಚ್ಚಿನ ತೊಡಗಿಸಿಕೊಳ್ಳುವಿಕೆಯು ಭಾರತ ಮತ್ತು ಉಜ್ಬೇಕಿಸ್ತಾನ್ ನಡುವೆ ಮಾತ್ರವಲ್ಲದೆ ಒಟ್ಟಾರೆ ಮಧ್ಯ ಏಷ್ಯಾ ಪ್ರದೇಶದೊಂದಿಗಿನ ರಾಜತಾಂತ್ರಿಕ ಬಾಂಧವ್ಯಕ್ಕೆ ಹೊಸ ವೇಗವನ್ನು ನೀಡುವ ನಿರೀಕ್ಷೆಯಿದೆ.

<><><>

ನವದೆಹಲಿಯಲ್ಲಿ ಇಂದು ನಡೆಯಲಿರುವ ರಾಷ್ಟ್ರೀಯ ವಸ್ತ್ರವಿನ್ಯಾಸ ತಂತ್ರಜ್ಞಾನ ಸಂಸ್ಥೆ - ನಿಫ್ಟ್‌ನ ೨೦೨೬ನೇ ಸಾಲಿನ ಜಂಟಿ ಘಟಿಕೋತ್ಸವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪಾಲ್ಗೊಳ್ಳಲಿದ್ದಾರೆ. ದೇಶಾದ್ಯಂತ ಇರುವ ಒಟ್ಟು ೧೮ ನಿಫ್ಟ್ ಕ್ಯಾಂಪಸ್‌ಗಳ ಪದವಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಪಯಣದ ಯಶಸ್ವಿ ಮುಕ್ತಾಯವನ್ನು ಸಂಭ್ರಮಿಸಲು ಹಾಗೂ ಪದವಿಗಳನ್ನು ಸ್ವೀಕರಿಸಲು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ದೇಶದ ಫ್ಯಾಶನ್ ಮತ್ತು ಜವಳಿ ಶಿಕ್ಷಣ ಕ್ಷೇತ್ರಕ್ಕೆ ಪ್ರಮುಖ ಮೈಲಿಗಲ್ಲಾಗಿರುವ ಈ ಸಮಾರಂಭದಲ್ಲಿ ಕೇಂದ್ರ ಜವಳಿ ಸಚಿವ ಗಿರಿರಾಜ್‌ಸಿಂಗ್ ಕೂಡ ಉಪಸ್ಥಿತರಿರಲಿದ್ದಾರೆ.

<><><>

ನೇಪಾಳದಲ್ಲಿ ಸಂಭವಿಸಿರುವ ದಿಢೀರ್ ಪ್ರವಾಹಕ್ಕೆ ಮೃತಪಟ್ಟವರ ಸಂಖ್ಯೆ ೭೯ಳಕ್ಕೆ ಏರಿದ್ದು, ತ್ರಿಶೂಲಿ-೩ಎ ಜಲವಿದ್ಯುತ್ ಯೋಜನೆ ಸೇರಿದಂತೆ ವಿವಿಧ ಯೋಜನಾ ಪ್ರದೇಶಗಳ ಸುರಂಗಗಳಲ್ಲಿ ಸಿಲುಕಿರುವ ಜನರನ್ನು ರಕ್ಷಿಸಲು ಶೋಧ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ಭಾರತ ಮತ್ತು ಚೀನಾ ತಜ್ಞರನ್ನೊಳಗೊಂಡ ರಕ್ಷಣಾಪಡೆಗಳು ಸುರಂಗದ ಒಳಗಿರುವವರನ್ನು ಸಂಪರ್ಕಿಸಲು ನಿರಂತರ ಯತ್ನಿಸುತ್ತಿವೆ.

ಆದರೂ ಇದುವರೆಗೆ ಒಳಗಿಂದ ಯಾವುದೇ ಸಂಪರ್ಕ ಸಾಧಿಸಲು ಸಾಧ್ಯವಿಲ್ಲ. ನಾಪತ್ತೆಯಾಗಿರುವ ಸುಮಾರು ೨ ಸಾವಿರದ ೫೦೦ ಜನರಲ್ಲಿ ನೂರಾರು ಮಂದಿ ಜಲವಿದ್ಯುತ್ ಯೋಜನೆಗಳ ಉದ್ಯೋಗಿಗಳೇ ಆಗಿದ್ದಾರೆ ಎಂದು ಶಂಕಿಸಲಾಗಿದೆ. ಇದೇ ದುರಂತದಲ್ಲಿ ಟಿಬೆಟ್‌ನಲ್ಲಿ ೧೮ ಜನರು ಮೃತಪಟ್ಟಿದ್ದು, ೫೪೮ ಮಂದಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ಈ ನಡುವೆ ತ್ರಿಶೂಲಿ ನದಿಯಲ್ಲಿ ಉಂಟಾದ ನೀರು ದಿಢೀರ್ ಉಕ್ಕಿ ಹರಿದ ಪರಿಣಾಮ ಮಧ್ಯ ನೇಪಾಳದಲ್ಲಿದ್ದ ತೂಗುಸೇತುವೆಯೊಂದು ಕೊಚ್ಚಿ ಹೋಗಿದೆ. ಈ ಸೇತುವೆ ಗಂಡಕ್ಕಿ ಪ್ರಾಂತ್ಯದ ಗೋರ್ಖಾ ಜಿಲ್ಲೆಯ ಫ್ಯಾಲ್‌ಚೌಕ್ ಹಾಗೂ ಪೃಥ್ವಿ ಹೆದ್ದಾರಿಯ ಚರೌಡಿಯನ್ನು ಸಂಪರ್ಕಿಸುತ್ತಿತ್ತು.

<><><><>

ಭಾರತೀಯ ನೌಕಾಪಡೆಯ ಮಿಸ್ತ್ರಾರ್ ವರ್ಗಕ್ಕೆ ಸೇರಿದ ತನ್ನ ೨ನೇ ಡೈವಿಂಗ್ ಸಪೋರ್ಟ್ ನೌಕೆ ಡಿಎಸ್‌ವಿ ನಿಪುಣ್ ಅನ್ನು ಇಂದು ಮುಂಬೈನ ನೇವಲ್ ಡಾಕ್‌ಯಾರ್ಡ್‌ನಲ್ಲಿ ಅಧಿಕೃತವಾಗಿ ನೌಕಾಪಡೆಗೆ ಸೇರ್ಪಡೆಗೊಳಿಸಲಾಗುವುದು. ಈ ನೌಕೆಯ ಸೇರ್ಪಡೆಯಿಂದ ಭಾರತದ ಕಡಲ ಗಡಿ ಮತ್ತು ಹಿತಾಸಕ್ತಿಯ ಕಡಲ ಪ್ರದೇಶಗಳಲ್ಲಿ ವಿಶೇಷ ಡೈವಿಂಗ್ ಮತ್ತು ನೀರಿನೊಳಗಿನ ವಿಶೇಷ ಕಾರ್ಯಾಚರಣೆಗಳನ್ನು ನಡೆಸುವ ಭಾರತೀಯ ನೌಕಾಪಡೆಯ ಸಾಮರ್ಥ್ಯಕ್ಕೆ ಮತ್ತಷ್ಟು ಬಲ ಸಿಗಲಿದೆ. ವಿಶಾಖಪಟ್ಟಣಂನ ಹಿಂದೂಸ್ಥಾನ್ ಶಿಪ್‌ಯಾರ್ಡ್ ಲಿಮಿಟೆಡ್ ಸಂಸ್ಥೆ ಸಂಪೂರ್ಣ ದೇಶೀಯವಾಗಿ ಈ ನೌಕೆಯನ್ನು ವಿನ್ಯಾಸಗೊಳಿಸಿ ನಿರ್ಮಿಸಿದ್ದು, ರಕ್ಷಣಾ ಹಡಗು ನಿರ್ಮಾಣ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆಗೆ ಇದು ಪ್ರಮುಖ ಮೈಲಿಗಲ್ಲಾಗಿದೆ.

<><><><>

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಿನ್ನೆ ಅಮೆರಿಕದ ಸೌತ್ ಕೆರೊಲಿನಾಗೆ ತಲುಪಿದ್ದಾರೆ. ಇಂದು ಮತ್ತು ನಾಳೆ ಆಶ್‌ವಿಲ್ಲೆಯಲ್ಲಿ ನಡೆಯಲಿರುವ ಜಿ-೨೦ ಮತ್ತು ಸಂಬಂಧಿತ ಪ್ರಮುಖ ಸಭೆಗಳಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ. ಸೌತ್ ಕೆರೊಲಿನಾಗೆ ಆಗಮಿಸುವ ಮುನ್ನ ಚಿಕಾಗೊದಲ್ಲಿರುವ ಭಾರತೀಯ ಧೂತವಾಸ ಕಚೇರಿಯಲ್ಲಿ ಭಾರತೀಯ ಸಮುದಾಯವನ್ನುದ್ದೇಶಿಸಿ ಹಣಕಾಸು ಸಚಿವರು ಭಾಷಣ ಮಾಡಿದ್ದರು.

ಈ ವೇಳೆ ಸಚಿವರು, ಸರ್ಕಾರದ ಸಾಲದ ಮಟ್ಟ, ಆರ್ಥಿಕ ಗುರಿಗಳು ಮತ್ತಿತರ ವಿಷಯಗಳ ಕುರಿತು ವಿವರಿಸಿ, ಬಹುಪಕ್ಷೀಯ ವ್ಯಾಪಾರ ಚೌಕಟ್ಟುಗಳು ನಿಧನಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆ ಭಾರತ ಐರೋಪ್ಯ ಒಕ್ಕೂಟ, ಆಸ್ಟ್ರೇಲಿಯಾ, ಯುಎಇ ಹಾಗೂ ಇಎಫ್‌ಟಿಎ ರಾಷ್ಟ್ರಗಳಂತಹ ಪಾಲುದಾರ ದೇಶಗಳೊಂದಿಗೆ ನೇರವಾಗಿ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಒಪ್ಪಂದಗಳನ್ನು ಮುನ್ನಡೆಸುತ್ತಿದೆ ಎಂದು ಹೇಳಿದರು.

<><><><>

ಶ್ರೀಲಂಕಾ ಕ್ರಿಕೆಟ್ ಮಂಡಳಿಯ ಆಡಳಿತದಲ್ಲಿ ಅಲ್ಲಿನ ಸರ್ಕಾರದ ಅತಿಯಾದ ಹಸ್ತಕ್ಷೇಪದ ಹಿನ್ನೆಲೆಯಲ್ಲಿ, ೨೦೨೭ ರಲ್ಲಿ ನಡೆಯಬೇಕಿದ್ದ ಚೊಚ್ಚಲ ಆವೃತ್ತಿಯ ಮಹಿಳೆಯರ ಚಾಂಪಿಯನ್ಸ್ ಟ್ರೋಫಿ ಸರಣಿಯ ಆತಿಥ್ಯದ ಹಕ್ಕನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ-ಐಸಿಸಿ ಶ್ರೀಲಂಕಾದಿಂದ ಹಿಂಪಡೆದಿದೆ. ಆತಿಥೇಯ ದೇಶ ಸೇರಿದಂತೆ ಒಟ್ಟು ಆರು ತಂಡಗಳು ಭಾಗವಹಿಸಬೇಕಿದ್ದ ಈ ಐತಿಹಾಸಿಕ ಪಂದ್ಯಾವಳಿಯನ್ನು ಆಯೋಜಿಸಲು ಶ್ರೀಲಂಕಾ ಸಜ್ಜಾಗಿತ್ತು. ಐಸಿಸಿಯ ಈ ನಿರ್ಣಾಯಕ ನಿರ್ಧಾರದಿಂದಾಗಿ ಮುಂಬರುವ ಟೂರ್ನಿಯಲ್ಲಿ ಶ್ರೀಲಂಕಾ ಮಹಿಳಾ ತಂಡದ ಭಾಗವಹಿಸುವಿಕೆಯ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ.

<><><><>

ಮಲೇಷ್ಯಾದ ಸೆರೆಂಬನ್‌ನಲ್ಲಿ ನಿನ್ನೆ ನಡೆದ ೨೦೨೬ ರ ಸ್ಕ್ವಾಷ್ ಸ್ಪರ್ಧೆಯಲ್ಲಿ, ಭಾರತದ ಅಭಯ್ ಸಿಂಗ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ತುವಾಂಕು ಮುಹ್ರಿಜ್ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಅಗ್ರ ಶ್ರೇಯಾಂಕಿತ ಅಭಯ್, ಪಿಎಸ್‌ಎ ಚಾಲೆಂಜರ್ ಟೂರ್ ೧೫ ಸ್ಪರ್ಧೆಯ ಫೈನಲ್‌ನಲ್ಲಿ ಚೀನಾದ ಹಾಂಗ್ ಕಾಂಗ್‌ನ ಮೂರನೇ ಶ್ರೇಯಾಂಕಿತ ಹೆನ್ರಿ ಲೆಯುಂಗ್ ಅವರನ್ನು ೩-೨ ಅಂತರದಿಂದ ಸೋಲಿಸಿದರು. ವಿಶ್ವದ ೨೪ನೇ ಸ್ಥಾನದಲ್ಲಿರುವ ಅಭಯ್ ಸಿಂಗ್ ಅವರಿಗೆ ಇದು ಮೂರನೇ ತುವಾಂಕು ಮುಹ್ರಿಜ್ ಪ್ರಶಸ್ತಿಯಾಗಿದೆ. ಅವರು ಈ ಹಿಂದೆ ೨೦೨೨ ಮತ್ತು ೨೦೨೪ರಲ್ಲಿ ಪಂದ್ಯಾವಳಿಯನ್ನು ಗೆದ್ದಿದ್ದರು. ೨೦೨೬ ರಲ್ಲಿ ಐಚಿ-ನಗೋಯಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗಾಗಿ ಅಭಯ್ ಭಾರತೀಯ ಸ್ಕ್ವಾಷ್ ತಂಡದ ಭಾಗವಾಗಿದ್ದಾರೆ.

<><><><>

ಭಾರತದ ೨೦ ವರ್ಷದೊಳಗಿನ ಪುರುಷರ ರಾಷ್ಟ್ರೀಯ ಫುಟ್‌ಬಾಲ್ ತಂಡವು ಇಂದು ತಾಷ್ಕೆಂಟ್‌ನ ದೋಸ್ಟ್ಲಿಕ್ ಕ್ರೀಡಾಂಗಣದಲ್ಲಿ ಸಿರಿಯಾ ವಿರುದ್ಧ ಎಎಫ್‌ಸಿ ೨೦ ವರ್ಷದೊಳಗಿನವರ ಏಷ್ಯನ್ ಕಪ್ ಚೀನಾ ೨೦೨೬ ಅರ್ಹತಾ ಪಂದ್ಯಗಳ ಅಭಿಯಾನವನ್ನು ಪ್ರಾರಂಭಿಸಲಿದೆ.

<><><><>

ಬೆಲ್ಜಿಯಂನ ವಾವ್ರೆಯಲ್ಲಿರುವ ಬೆಲ್ಫಿಯಸ್ ಹಾಕಿ ಅರೆನಾದಲ್ಲಿ ನಿನ್ನೆ ಸಂಜೆ ನಡೆದ ಹಾಕಿ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡವನ್ನು ೧-೦ ಗೋಲುಗಳಿಂದ ಸೋಲಿಸುವ ಮೂಲಕ ಜರ್ಮನಿ ಸತತ ೨ನೇ ಬಾರಿ ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್ ಪ್ರಶಸ್ತಿಯನ್ನು ಗೆದ್ದಿದೆ. ಆ ಮೂಲಕ ಈ ಸಾಧನೆ ಮಾಡಿದ ಮೊದಲ ತಂಡವಾಗಿ ಹೊರಹೊಮ್ಮಿದೆ. ಇದು ಜರ್ಮನಿಯ ಒಟ್ಟಾರೆ ನಾಲ್ಕನೇ ಹಾಕಿ ವಿಶ್ವಕಪ್ ಪ್ರಶಸ್ತಿಯಾಗಿದೆ. ಇದಕ್ಕೂ ಮೊದಲು, ಪುರುಷರ ಹಾಕಿ ವಿಶ್ವಕಪ್‌ನ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಅರ್ಜೆಂಟೀನಾ ತಂಡ ನೆದರ್‌ಲ್ಯಾಂಡ್ಸ್ ಅನ್ನು ೨-೧ ಗೋಲುಗಳಿಂದ ಸೋಲಿಸಿ ಕಂಚಿನ ಪದಕ ತನ್ನದಾಗಿಸಿಕೊಂಡಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>